# ಆಹಾ ಸುದ್ದಿ!

★ ಸಸಿತೋಟ



ಕೋಸ್ಟಾರಿಕಾದಲ್ಲಿ ವಸತಿರಹಿತರನ್ನು ಶುಚಿಗೊಳಿಸಲೆಂದೇ ಪ್ರತಿಷ್ಠಾನವೊಂದು ಹುಟ್ಟಿಕೊಂಡಿದೆಯಂತೆ. ಶೌಚಾಲಯ, ಸ್ನಾನಗೃಹಗಳನ್ನೊಳಗೊಂಡ ಬಸ್ ತೆಗೆದುಕೊಂಡು ಹೋಗಿ ಬೀದಿ ಬದಿ ಇದ್ದವರನ್ನು ಎಳೆ ತಂದು ಕ್ಷೌರ ಮಾಡಿಸಿ, ಸ್ನಾನ ಮಾಡಿಸಿ ಕಳಿಸುವ ಕಾರ್ಯವನ್ನು ಸ್ವಯಂ ಸೇವಕರು ವಾರಕ್ಕೊಮ್ಮೆ ಮಾಡುತ್ತಾರಂತೆ. ಇವೆರಡೇನೋ ಸರಿ, ಆದರೆ ಶೌಚಕಾರ್ಯವನ್ನೂ ವಾರಕ್ಕೊಮ್ಮೆ... ಛೆ, ಇರಲಿಕ್ಕಿಲ್ಲ.



ಯೂರೋಪ್‌ನಲ್ಲಿ ಈಗ ಉತ್ಸವಗಳು ಜೋರು. ಅಲ್ಲೆಲ್ಲ ಹಾಡು–ಕುಣಿತಗಳದ್ದೇ ದರ್ಬಾರು. ಒಂದು ಕಡೆ ಹಿಟ್ಟಿನ ಎರಚಾಟ ನಡೆದರೆ, ಇನ್ನೊಂದು ಕಡೆ ಮೊಟ್ಟೆಗಳ ಎಸೆದಾಟ. ಆದರೆ ಸ್ಪೇನ್‌ನಲ್ಲಿ ಎಲ್ ಎನ್‌ಫೆರಿನಾಟ್ಸ್ ಎಂಬ ಹಬ್ಬದಲ್ಲಿ ಈ ಎರಡನ್ನೂ ಒಮ್ಮೆಲೇ ಪರಸ್ಪರ ಎಸೆಯುವ ಆಚರಣೆ ನಡೆಯುತ್ತದಂತೆ. ಕಾವಲಿಯನ್ನೂ ಎಸೆದುಕೊಂಡರೆ ಆಮ್ಲೆಟ್ ತಯಾರಿಯನ್ನೂ ನಡೆಸಬಹುದು.

ಅಮೆರಿಕದ ಖಜಾನೆ ಕಾರ್ಯದರ್ಶಿ ಸ್ಟೀವ್ ಮಿಹ್ ನೂ ಶಿನ್‌ಗೆ ಹೊಸ ವರ್ಷಕ್ಕೆ ಎರಡು ದಿನಗಳಿರುವಾಗಲೇ ಉಡುಗೊರೆಯ ಪ್ಯಾಕೊಂದು ಬಂದು ಕಂಪೌಂಡ್‌ನಲ್ಲಿ ಬಿತ್ತಂತೆ. ಚೆಂದನೆಯ ಗಿಫ್ಟ್ ಪ್ಯಾಕ್ ತೆರೆದು ನೋಡಿದರೆ ಕುದುರೆ ಲದ್ದಿ. ಇಂದ ವಿಳಾಸದಲ್ಲಿ ಅಮೆರಿಕದ ನಾಗರಿಕರು ಎಂದಿತ್ತಂತೆ. ಪೊಲೀಸರು ಹೊಸ ವರ್ಷಾಚರಣೆಯ ಹಂಗು ತೊರೆದು ಈಗ ಲದ್ದಿಯ ಜಾಡು ಹಿಡಿದು ವಿಚಾರಣೆಗೆ ಹೊರಟಿದ್ದಾರಂತೆ.

ಅಮೆರಿಕದ ಹವಾಯಿನಲ್ಲಿ ಹೂಬೇಹೂಬ್ ಬಾಲಿವುಡ್ ಸಿನಿಮಾ ಕಥೆಯೊಂದು ವರದಿಯಾಗಿದೆ. 60 ವರ್ಷಗಳಿಂದ ಸ್ನೇಹಿತರಾಗಿದ್ದ ಅಲನ್ ಹಾಗೂ ವಾಲ್ಟರ್ ಎಂಬ ಇಬ್ಬರ ತಾಯಿಯೂ ಒಬ್ಬಳೇ, ಅಂದರೆ ಇಬ್ಬರೂ ಸಹೋದರರು ಎಂಬ ಸತ್ಯ ಈಗ ಗೊತ್ತಾಗಿದೆಯಂತೆ. ಒಬ್ಬಾತ ಬಾಲ್ಯದಲ್ಲೇ ಬೇರ್ಪಟ್ಟು ಯಾರೋ ದತ್ತು ತೆಗೆದುಕೊಂಡಿದ್ದರಂತೆ. ಕುತೂಹಲದಿಂದ ಡಿಎನ್‌ಎ ಪರೀಕ್ಷೆ ಮಾಡಿಸಿಕೊಂಡು ಈ ಕುರಿತ ವೆಬ್‌ಸೈಟ್‌ನಲ್ಲಿ ನೋಡಿದಾಗ ಈ ಸತ್ಯ ಗೊತ್ತಾಯ್ತಂತೆ. ಬಾಲಿವುಡ್ ಸಿನಿಮಾಗೆ ಕಥೆಯಂತೂ ರೆಡಿ ಇದೆ.



ಇದೇನು, ಆದಿ ಮಾನವನಿಗೂ ಪೂರ್ವಜನೊಬ್ಬ ಕಾಣಿಸಿಕೊಂಡಿದ್ದಾನೆ ಎಂದು ವಾಹಿನಿಗಳು ಬ್ರೇಕಿಂಗ್ ನ್ಯೂಸ್ ಕೊಡುವ ಮುನ್ನವೇ ಒಂದು ಸ್ಪಷ್ಟನೆ, ವಸ್ತ್ರದ ಹಂಗೇಕೆ ಎಂದು ಕಿತ್ತು ಬಿಸಾಡುವ ನಗ್ನಪಂಥಿಗಳು ಸೇರಿಕೊಂಡು ವಿಯೆಟ್ನಾಮಿನ ಹನೋಯಿಯ ದ್ವೀಪವೊಂದರಲ್ಲಿ ಕ್ಲಬ್ ಮಾಡಿಕೊಂಡಿದ್ದಾರಂತೆ. ಆದಿ ಮಾನವ ಏನೇನು ಮಾಡುತ್ತಾನೋ ಅದನ್ನೆಲ್ಲ ಮನಸೋ ಇಚ್ಛೆ ಮಾಡಿ ಮೋಜು ಅನುಭವಿಸುವುದು. ಕಾಲಚಕ್ರ ಹಿಂದೆ ಉರುಳುತ್ತಿದೆ.



ಈತ ಇಂದೋರ್‌ನ ಸಂಚಾರಿ ಪೊಲೀಸ್ ರಣಜೀತ್ ಸಿಂಗ್. ಬಾಲಿವುಡ್ ಸಿನಿಮಾಗಳೇ ಈತನ ಪ್ರೇರಣೆಯಂತೆ. ಆದರೆ ಈತನಿಗೆ ಜನಪ್ರಿಯತೆ ತಂದುಕೊಟ್ಟಿದ್ದು ಮಾತ್ರ ಮೈಕೆಲ್ ಜಾಕ್ಸನ್‌ನ 'ಮೂನ್‌ವಾಕ್' ನೃತ್ಯದ ಹೆಜ್ಜೆಯನ್ನು ಅನುಸರಿಸುವ ಆತನ ಸಂಚಾರ ನಿಯಂತ್ರಣದ ಶೈಲಿ. ಸಂಚಾರ ದಟ್ಟಣೆ ಅಲ್ಲಿ ನಿಯಂತ್ರಣದಲ್ಲಿದ್ದು, ವಿಶ್ವವಿದ್ಯಾನಿಲಯವೊಂದು ಈ ಕುರಿತು ಅಧ್ಯಯನವನ್ನೂ ಶುರು ಮಾಡಿದೆಯಂತೆ. 'ರಣಜೀತ್ ಸಂಚಾರ ನಿಯಂತ್ರಣ' ಬೆಂಗಳೂರಿಗೂ ಬಂದರೆ ಇಲ್ಲಿಯ ಸವಾರರು ಸನ್ನಿ ನೃತ್ಯದ ಶೈಲಿ ಅನುಸರಿಸಬಹುದು.